ಎಷ್ಟು ದಿನಗಳಲ್ಲಿ ಮತ್ತು ಎಷ್ಟು ವರ್ಷಗಳಲ್ಲಿ ಪೂರ್ತಿ ಮಾಡುತ್ತೀರಿ ಎನ್ನುವುದನ್ನು ಹೇಳಬೇಕು.

ಶ್ರೀ ಎನ್. ಚಿಕ್ಕೇಗೌಡ : ಮಾನ್ಯ ಅಧ್ಯಕ್ಷರೇ, ತ್ರಿಪುರಾದಲ್ಲಿ ಇರತಕ್ಕಂಥ ಕಟ್ಟಡದಲ್ಲಿ ಕಿಟಕಿ ಬಾಗಿಲುಗಳು ಪೂರ್ತಿಯಾಗಿ ಹಾಳಾಗಿದೆ. ಮೇಲುಗಡೆ ಸೋರುತ್ತಿದೆ. ಜೋಡಿಸಿರತಕ್ಕಂಥ ವಿದ್ಯುತ್ ತಂತಿಯನ್ನು ಕೂಡ ಕಿತ್ತುಹಾಕಿದ್ದಾರೆ. ಆದ್ದರಿಂದ ಅಲ್ಲಿ ಹೆಚ್ಚಿನ ದುರಸ್ತಿಯನ್ನು ಮಾಡಬೇಕಾಗಿದೆ. ಮತ್ತು ಹಾಲಿ ಕೃಷಿ ಸಹಾಯಕರ ಹುದ್ದೆಗಳು ಅಲ್ಲಿ ಖಾಲಿ ಇವೆ. ಬೆಟ್ಟದ ಮನೆಯೂ ಕೂಡ ಸೋರುತ್ತಿದೆ. ಹಿಂದಿನ ಬಾಗಿಲು ಗೆದ್ದಲು ಹಿಡಿದಿದೆ. ಹಂಡೆಯನ್ನು ಕಿತ್ತಿದ್ದಾರೆ. ವೆಂಟಿಲೇಟರ್ ಕೂಡ ಸರಿಯಿಲ್ಲ. ವಿದ್ಯುತ್ ತಂತಿಯ ಪ್ಲಗ್‌ನ್ನು ಕೂಡ ಕಿತ್ತಿದ್ದಾರೆ. ಕೃಷಿ ಸಹಯಕರ ಹುದ್ದೆಗಳು ಖಾಲಿ ಇವೆ. ಆದುದರಿಂದ ಅಲ್ಲಿ ಹೋಗಿ ಯಾರೂ ಕೂಡ ಆ ಮನೆಗಳನ್ನು ಅಕ್ಯುಪೈ ಮಾಡಿಲ್ಲ. ಇದು ಇರತಕ್ಕಂಥ ಪರಿಸ್ಥಿತಿ. ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳುವ ಹಾಗೆ ಇವುಗಳನ್ನು ನಾವು ಜಿಲ್ಲಾ ಪರಿಷತ್ತಿಗೆ ವಹಿಸಿಬಿಟ್ಟಿದ್ದೇವೆ. ಜಿಲ್ಲಾ ಪರಿಷತ್ತಿನ ಇಂಜಿನಿಯರಿಂಗ್ ವಿಭಾಗದವರು ಅವುಗಳನ್ನು ರಿಪೇರಿ ಮಾಡಿ, ದುರಸ್ತಿ ಮಾಡಿ ಇಟ್ಟುಕೊಳ್ಳಬೇಕು. ಈಗ ನಮ್ಮ ಕೃಷಿ ಸಹಾಯಕರ ನೂರಾರು ಹುದ್ದೆಗಳು ಖಾಲಿ ಇವೆ. ಅವುಗಳಿಗೆ ಇವತ್ತು ಒಂದು austerity measures and economy measures ಎಂದು ಇರುವುದರಿಂದ ಭರ್ತಿ ಮಾಡಕೂಡದು ಎಂದು ನಮಗೆ ಹಣಕಾಸಿನ ಇಲಾಖೆಯವರು ಹೇಳಿದ್ದಾರೆ. ಅದರ ಬಗ್ಗೆ ಸರ್ಕಾರದ ಆದೇಶ ಕೂಡ ಬಂದಿದೆ. ಈ ಹುದ್ದೆಗಳು ಖಾಲಿ ಇವೆ. ಮತ್ತು ಹುದ್ದೆಗಳು ಭರ್ತಿ ಆಗದಿರುವಾಗ ಕಟ್ಟಡಗಳು ಕೂಡ ಖಾಲಿ ಇರಲೇಬೇಕು. ಆ ರೀತಿ ಇರುವಾಗ ಅಲ್ಲಿ ಕೆಲವರು ಕಿಟಕಿ ಬಾಗಿಲುಗಳನ್ನು ಕಿತ್ತುಕೊಂಡು ಹೋಗಿದ್ದಾರೆ. ಮಲೆನಾಡಿನಲ್ಲಿ ಈ ರೀತಿ ಕಿತ್ತುಕೊಂಡು ಹೋಗುವುದಿಲ್ಲ. ಅಲ್ಲಿ ಕಳ್ಳತನವನ್ನು ಮಾಡುವುದಿಲ್ಲ ಎಂದು ನಾನು ತಿಳಿದುಕೊಂಡಿದ್ದೆ ಆದರೆ ಅಲ್ಲಿ ಕೂಡ ಕಳ್ಳತನವನ್ನು ಮಾಡಿದ್ದಾರೆ. ಏಕೆಂದರೆ ಬೆಂಗಳೂರಿನ ಸುತ್ತ ಒಂದು ದಿವಸ ಯಾರು ವಾಸ ಇಲ್ಲದಿದ್ದರೆ ಕಿಟಕಿ ಬಾಗಿಲುಗಳನ್ನು ಕಿತ್ತುಕೊಂಡು ಹೋಗುತ್ತಾರೆ. ಸಾಮಾನ್ಯವಾಗಿ ನಗರ ಪ್ರದೇಶದಲ್ಲಿ ಹಗಲು ಹೊತ್ತಿನಲ್ಲಿಯೇ ಹೆಂಗಸರ ಕತ್ತಿನಿಂದ ಸರವನ್ನು ಕಿತ್ತುಕೊಂಡು ಹೋಗುತ್ತಾರೆ. ಅಲ್ಲಿ ಬೆಟ್ಟಗುಡ್ಡಗಳು ಇರುವ ಪ್ರದೇಶವಾದ್ದರಿಂದ ಅಲ್ಲಿ ಈ ರೀತಿ ಆಗಿದೆ.

ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷರೇ, ಕೊನೆಯ ಪ್ರಶ್ನೆ.

ಅಧ್ಯಕ್ಷರು : ಕಿಟಕಿ ಬಾಗಿಲು ಏನೂ ಇಲ್ಲದಿದ್ದರೆ ಪ್ರಶ್ನೆ ಏತಕ್ಕೆ ಬರುತ್ತದೆ?

ಪರಿಸರ ಮಾಲಿನ್ಯಕ್ಕೆ ಕಾರಣವಾದ ಕಾರ್ಖಾನೆಗಳು

440 - ಶ್ರೀ ಆರ್.ಎನ್. ನಾಯಕ್ (ಬಟ್ಕಳ) : ಮಾನ್ಯ ವಿಜ್ಞಾನ, ತಂತ್ರಜ್ಞಾನ ಮತ್ತು ಜೀವಿಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಖಾತೆಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ 1991-92ನೇ ಸಾಲಿನಲ್ಲಿ ಪರಿಸರ ಮಾಲಿನ್ಯಕ್ಕೆ ಕಾರಣವಾದ ಎಷ್ಟು ಕಾರ್ಖಾನೆಗಳನ್ನು ಸರ್ಕಾರವು ಗುರ್ತಿಸಿದೆ?

ಆ) ಅವುಗಳಲ್ಲಿ ಖಾಸಗಿಯವು ಎಷ್ಟು ಮತ್ತು ಸರ್ಕಾರಿ ಅಥವಾ ಅರೆ ಸರ್ಕಾರಿ ಮಾಲೀಕತ್ವ ಹೊಂದಿದವು ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು).

ಶ್ರೀ ಬಿ. ಬಸವಲಿಂಗಪ್ಪ (ವಿಜ್ಞಾನ ಮತ್ತು ತಂತ್ರಜ್ಞಾನ, ಜೀವಿಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಇಲಾಖೆ ಸಚಿವರು):

ಅ) 1028 ಕಾರ್ಖಾನೆಗಳನ್ನು ಗುರ್ತಿಸಲಾಗಿದೆ.

ಆ) ವರ್ಗೀಕರಣ ಅನುಬಂಧದಂತೆ ಮಾಡಿದೆ.

ಅನುಬಂಧ

ಜಿಲ್ಲಾವಾರು 1991-2ರಲ್ಲಿ ಎಂಗಡಿಸಲಾದ ಕೈಗಾರಿಕೆಗಳ ಪಟ್ಟಿ

ಕ್ರ ಸಂ	ಜಿಲ್ಲೆಯ ಹೆಸರು	ಸರ್ಕಾರಿ	ಅರೆಸರ್ಕಾರಿ	ಖಾಸಗಿ	ಒಟ್ಟು
1.	ಬೀದರ್	-	-	36	36
2.	ಗುಲ್ಬರ್ಗ	-	-	4	4
3.	ರಾಯಚೂರು	-	-	29	29
4.	ಬೆಳಗಾಂ	1	11	43	55
5.	ಧಾರವಾರ್	2	2	32	36
6.	ಉತ್ತರ ಕನ್ನಡ	1	-	5	6
7.	ಬಿಜಾಪುರ	1	1	1	3
8.	ಮೈಸೂರು	-	1	139	40
9.	ಮಂಡ್ಯ	-	1	68	69
10.	ಚಿತ್ರದುರ್ಗ	-	1	45	46
11.	ಹಾಸನ	-	-	26	26
12.	ಚಿಕ್ಕಮಂಗಳೂರು	-	-	1	1
13.	ಮಡಿಕೇರಿ	-	-	2	2
14.	ಬಳ್ಳಾರಿ	-	-	37	37
15.	ಶಿವಮೊಗ್ಗ	-	-	65	65
16.	ಮಂಗಳೂರು	-	-	65	65
17.	ತುಮಕೂರು	-	-	17	17
18.	ಕೋಲಾರ	-	-	19	19
19.	ಬೆಂಗಳೂರು	-	1	331	332
20.	ಬೆಂಗಳೂರು (ರೂರಲ್)	2	-	38	40
	ಒಟ್ಟು	7	18	1003	1028

ಶ್ರೀ ಆರ್.ಎನ್. ನಾಯಕ್ : ಮಾನ್ಯ ಅಧ್ಯಕ್ಷರೇ, ನಮಗೆ ಕೊಟ್ಟಂಥ ಉತ್ತರದಲ್ಲಿ ಪರಿಸರ ಮಾಲಿನ್ಯಕ್ಕೆ ಕಾರಣವಾದ ಸರ್ಕಾರಿ ಕಾರ್ಖಾನೆಗಳು 7 ಎಂತಲೂ, ಅರೆ ಸರ್ಕಾರಿ ಕಾರ್ಖಾನೆಗಳು 18 ಎಂದೂ ಹಾಗೂ ಖಾಸಗಿಯವರು 1003 ಎಂದೂ ತಿಳಿಸಲಾಗಿದೆ. ಇಲ್ಲಿ ಒಟ್ಟಿಗೆ ಎಷ್ಟು ಕಾರ್ಖಾನೆಗಳು ನಮ್ಮ ರಾಜ್ಯದಲ್ಲಿ ಇದೆ. ಅವುಗಳಲ್ಲಿ ಪರಿಸರ ಮಾಲಿನ್ಯಕ್ಕೆ ಕಾರಣವಾದ ಕಾರ್ಖಾನೆಗಳ ಸಂಖ್ಯೆ ಎಷ್ಟು? ಮತ್ತು ಈ ಪರಿಸರ ಮಾಲಿನ್ಯಕ್ಕೆ ಕಾರಣವಾದ ಕಾರ್ಖಾನೆಗಳು ಇಂಥವು ಎಂದು ಯಾರು ಅದನ್ನು ನಿರ್ಧರಿಸಬೇಕು ? ಅವರು ಯಾವ ಮಟ್ಟದ ಅಧಿಕಾರಿ ? ? ಮತ್ತು

ಅವರಿಗೇನಾದರೂ ಟ್ರೈನಿಂಗ್ ಇದೆಯೇ ? ಹಾಗೂ ಅಂಥ ಅಧಿಕಾರಿಗಳು ಇಲ್ಲಿ ಏನು ನಮಗೆ ಸ್ಯಾಂಕ್ಷನ್ ತೋರಿಸಿದ್ದಾರೆ, ಅವರೆಲ್ಲರೂ ಹೋಗಿ ಅಲ್ಲಿ ಕಾರ್ಖಾನೆಗಳನ್ನು ನೋಡಿ ಈ ರೀತಿಯಲ್ಲಿ ವರದಿಯನ್ನು ಸಲ್ಲಿಸಿದ್ದಾರೋ ಅಥವಾ ಕುಳಿತುಕೊಂಡಲ್ಲೇ ವರದಿಯನ್ನು ಸಲ್ಲಿಸಿದ್ದಾರೋ ಎನ್ನುವುದನ್ನು ದಯಮಾಡಿ ತಿಳಿಸಬೇಕು.

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ಸುಮಾರಾಗಿ ಈ ಕಾರ್ಖಾನೆಗಳ ಸಂಖ್ಯೆಯನ್ನು ಹೇಳುವವರು ಕೈಗಾರಿಕಾ ಇಲಾಖೆಯವರು. ಆದರೆ ಸಾಮಾನ್ಯವಾಗಿ 1.50 ಲಕ್ಷ ಸಣ್ಣ ಕೈಗಾರಿಕೆಗಳು, ಮಧ್ಯಮ, ಭಾರಿ ಕೈಗಾರಿಕೆಗಳು ಕೂಡ ಇವೆ.

ಅವುಗಳಲ್ಲಿ ನಾವು ಗುರುತಿಸಿರತಕ್ಕಂಥದ್ದು ಎಂದರೆ 1028ಮಾಲಿನ್ಯವನ್ನು ಮಾಡತಕ್ಕಂಥ ಕಾರ್ಖಾನೆಗಳು. ಅದರಲ್ಲಿ ಈ ಒಂದು ಸಂಖ್ಯೆ ಸರಿ ಇದೆಯೇ ಇಲ್ಲವೇ ಎನ್ನುವುದಕ್ಕೆ ನಾನು ನಿಖರವಾಗಿ ಉತ್ತರವನ್ನು ಹೇಳುವುದಕ್ಕಾಗುವುದಿಲ್ಲ. ಕಾರಣವೇನೆಂದರೆ, ಈ ಒಂದು ಡಿಪಾರ್ಟ್‌ಮೆಂಟ್ ಬಂದಿರತಕ್ಕಂಥದ್ದು ಈಗ ಐದಾರು ತಿಂಗಳಿಂದ. ಅಲ್ಲಲ್ಲೇ ರೀಜನಲ್ ಆಫೀಸ್‌ಗಳು ಇವೆ, ಪಲ್ಯೂಷನ್ ಕಂಟ್ರೋಲ್ ಬೋರ್ಡ್‌ನಲ್ಲಿ, ಅಲ್ಲೆಲ್ಲಾ ಯಾರ್‍ಯಾರು ಇದ್ದಾರೆ, ಯಾರ್‍ಯಾರು ಕೆಲಸವನ್ನು ಮಾಡುತ್ತಿದ್ದಾರೆ, ಹಾಗೆ ಜನ ಇರುತ್ತಾರೆ. ಅವರಿಗೆ ಸರಿಯಾಗಿರತಕ್ಕಂಥ ಅರ್ಹತೆ ಇದೆಯೇ ಇಲ್ಲವೇ ಎನ್ನತಕ್ಕಂಥದ್ದು ನನಗೆ ಇನ್ನೂ ಮನವರಿಕೆಯಾಗಿಲ್ಲ. ಅವರಿಗೆ ಯಾರಿಗೂ ಅರ್ಹತೆ ಇಲ್ಲ ಎಂದು ನನಗೆ ಮನವರಿಕೆಯಾಗಿದೆ.

ಅವರನ್ನು ಬದಲಾವಣೆ ಮಾಡುವವರೆಗೆ ನಮಗೆ ಈ ಒಂದು ಇಲಾಖೆ ಸರಿಯಾಗಿ ಕೆಲಸ ಮಾಡುವುದಕ್ಕೆ ಆಗುವುದೇ ಇಲ್ಲ. ಅವರು ಕೊಟ್ಟಿರತಕ್ಕ ಸಂಖ್ಯೆಯನ್ನು ನಾವು ಒದಗಿಸಿದ್ದೇವೆ. ಅದು ಸರಿಯೇ, ಸರಿ ಇಲ್ಲವೇ ಎಂದು ಹೇಳುವುದಕ್ಕಾಗುವುದಿಲ್ಲ. ನನ್ನ ಪ್ರಕಾರ, ಸುಮಾರು ಆರು ಸಾವಿರ ಕಾರ್ಖಾನೆಗಳು ಈ ಮಾಲಿನ್ಯವನ್ನು ಉಂಟು ಮಾಡುತ್ತಿದೆ ಎಂದು ನನಗೆ ಮನವರಿಕೆಯಾಗಿದೆ. ಸಣ್ಣ ಪ್ರಮಾಣದಲ್ಲಿ ಮಾಡಬಹುದು, ದೊಡ್ಡಪ್ರಮಾಣದಲ್ಲಿ ಮಾಡಬಹುದು. ಆದ್ದರಿಂದ ಈ ಸಭೆಗೆ ತಿಳಿಸುವುದೇನೆಂದರೆ, ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಪುನಃ ಅದನ್ನು ಕೂಲಂಕುಷವಾಗಿ ನಾವೇ ಅದನ್ನು ತನಿಖೆ ಮಾಡಿ ಅಗತ್ಯ ಇರತಕ್ಕ ಅಧಿಕಾರಿಗಳನ್ನು ಕಳಿಸಿ ಮತ್ತು ಇಂಡಸ್ಟ್ರಿಯಲ್ ಡಿಪಾರ್ಟ್‌ಮೆಂಟ್‌ನವರೊಂದಿಗೆ ಸಮಾಲೋಚನೆ ಮಾಡಿ ಸರಿಯಾದ ಸಂಖ್ಯೆಯನ್ನು ಒದಗಿಸಿಕೊಡಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಆರ್.ಎನ್. ನಾಯಕ್ : ನನಗೆ ಕೊಟ್ಟಿರುವ ಉತ್ತರದ ಪ್ರಕಾರ, ಉತ್ತರ ಕನ್ನಡ ಜಿಲ್ಲೆಯಲ್ಲಿ ಸರ್ಕಾರ ನಡೆಸುವಂತಹ ಕಾರ್ಖಾನೆ ಒಂದು, ಈ ಪೊಲ್ಯೂಷನ್‌ಗೆ ಅದು ಕಾರಣ ಎಂದು ತಿಳಿಸಲಾಗಿದೆ. ಹಾಗೂ ಖಾಸಗಿಯವರದು ಐದು ಎಂದು ತಿಳಿಸಿದ್ದಾರೆ. ಕೆಲವು ವರ್ಷಗಳ ಹಿಂದೆ ಜನತಾದಳ ಸರ್ಕಾರ ಇಲ್ಲಿ ಇದ್ದಾಗ ಉತ್ತರಕನ್ನಡ ಜಿಲ್ಲೆಯಲ್ಲಿರುವಂತಹ ಕಾಸ್ಟಿಕ್ ಸೋಡ ಫ್ಯಾಕ್ಟರಿ ಪರಿಸರ ಮಾಲಿನ್ಯ ಮಾಡುತ್ತದೆ, ಅದು ನೀರನ್ನು ಸಮುದ್ರಕ್ಕೆ ಬಿಟ್ಟರೆ ಮೀನುಗಳು ಸಾಯುತ್ತವೆ, ಅಷ್ಟೆ ಅಲ್ಲ, ಸಮುದ್ರಕ್ಕೆ ಮಾಲಿನ್ಯದ ನೀರನ್ನು ಬಿಟ್ಟು ಅದರಲ್ಲಿರುವ ಮೀನನ್ನು ತಿಂದರೆ ಮನುಷ್ಯನಿಗೆ ರೋಗಬರುತ್ತದೆಂದು ಬಹಳ ಸಲ ಚರ್ಚೆ ನಡೆದುಹೋಯಿತು. ಅಲ್ಲಿ ವಿಚಾರ ವಿನಿಮಯ ಆಯಿತು. ಆದರೆ ಇದಕ್ಕೆ ನಿಖರವಾದ ಉತ್ತರ ಆ ಸರ್ಕಾರ ಆಗಿನಿಂದ ಕೊಟ್ಟಿರಲಿಲ್ಲ. ಅದು ಏತಕ್ಕೆ ಕೊಟ್ಟಿರಲಿಲ್ಲವೋ ನನಗೆ ಗೊತ್ತಿರಲಿಲ್ಲ.

ಆದರೆ ಈಗ ನಮ್ಮ ಸರ್ಕಾರ ಬಂದಿದೆ. ಪರಿಸರ ಮಾಲಿನ್ಯಕ್ಕೆ ಈ ಒಂದು ಇಲಾಖೆ ಇದೆ. ಅದಕ್ಕೆ ದಕ್ಷ ಮಂತ್ರಿಗಳು ಇದ್ದಾರೆ. ಹೀಗಿದ್ದಾಗ ಕಾಸ್ಟಿಕ್ ಸೋಡಾ ಫ್ಯಾಕ್ಟರಿಯವರು ಆ ಕಾಲದಲ್ಲಿ ಮಾಲಿನ್ಯ ಮಾಡುತ್ತಿರುವುದನ್ನು ಈಗಲೂ ಮುಂದುವರಿಸಿಕೊಂಡು ಬರುತ್ತಿದ್ದಾರೆ. ಈಗ ಅದಕ್ಕೆ ಏನಾದರೂ ಕಂಟ್ರೋಲ್ ಮಾಡಿದ್ದಾರೆಯೇ ಹೇಗೆ? ಅದರ ಬಗ್ಗೆ ಏನಾದರೂ ಪರೀಕ್ಷೆ ನಡೆಸಿದ್ದಾತೆಯೇ ಅಥವಾ ಮಂತ್ರಿಗಳು ಅಲ್ಲಿಗೆ ಹಿಂದೆ ಭೇಟಿ ಮಾಡಿದ್ದಾರೆಯೇ ಅಥವಾ ಮಾಡುತ್ತಾರೋ ಅದರ ಬಗ್ಗೆ ಏನು ಮಾಡುತ್ತೀರಿ ಎಂಬುದನ್ನು ದಯಮಾಡಿ ಹೇಳಿ. ಖಾಸಗಿ ಕೈಗಾರಿಕೆಗಳು ಯಾವುವು ಎಂಬುದನ್ನು ತಿಳಿಸಬೇಕು.

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಸದಸ್ಯರು ಹೇಳಿರತಕ್ಕ ಅಭಿಪ್ರಾಯವನ್ನು ನಾನು ಕೇಳಿದ್ದೇನೆ. ನಾನು ಅಲ್ಲಿಗೆ ಹೋಗಿಲ್ಲ – ಕಾಸ್ಟಿಕ್ ಸೋಡಾ ತಯಾರು ಮಾಡತಕ್ಕ ಕಾರ್ಖಾನೆಗಳು ನಮ್ಮ ಇಂಡಿಯಾ ದೇಶದಲ್ಲಿ ಇವೆ. ಉತ್ತರ ಕನ್ನಡ ಪ್ರದೇಶದಲ್ಲಿರುವ ಕಾರ್ಖಾನೆಗಳಲ್ಲಿ ಏನು ಉತ್ಪಾದನೆ ಆಗುತ್ತದೆ. ಕಾರ್ಖಾನೆಗಳಲ್ಲಿ ಅದಕ್ಕೆ ಸರಿಯಾಗಿ ಟ್ರೀಟ್‌ಮೆಂಟ್ ಪ್ಲಾಂಟ್ ಹಾಕಿ ಬಿಟ್ಟು ಜನಗಳಿಗಾಗಲಿ ಮತ್ತು ಮೀನುಗಳಿಗೆ ಆಗಲಿ, ಜೀವರಾಶಿಗಳಿಗೆ ಆಗಲಿ, ಅನಾನುಕೂಲ ಆಗದಹಾಗೆ ಮಾಡುತ್ತಿದ್ದಾರೆ. ಅದೇರೀತಿ ಇಲ್ಲಿಯೂ ಕೂಡ ಮಾಡುತ್ತಿಲ್ಲ ಎಂದು ಕೇಳಿದ್ದೇವೆ. ಆ ರೀತಿ ಮಾಡಲಿಕ್ಕೆ ನಾನು ಒತ್ತಾಯ ಮಾಡಿ ಫ್ಯಾಕ್ಟರಿಗಳನ್ನು ಭೇಟಿ ಮಾಡಿಬಿಟ್ಟು ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಆರ್.ಎನ್. ನಾಯಕ್ : ಉತ್ತರ ಕನ್ನಡ ಜಿಲ್ಲೆಯಲ್ಲಿ ಸರ್ಕಾರದವರು ನಡೆಸುವಂತಹ ಒಂದು ಕಾರ್ಖಾನೆಯಲ್ಲಿಯೂ ಸಹ ಪೊಲ್ಯೂಷನ್ ಇದೆಯೆಂದು ತೋರಿಸಿದ್ದಾರೆ. ಅದು ಯಾವುದೆಂದು ಹೇಳಿ ಪೊಲ್ಯೂಷನ್ ಮಾಡುವಂತಹ ಕಾರ್ಖಾನೆಯಾಗಿದ್ದರೆ ಅಂತಹ ಕಾರ್ಖಾನೆಯನ್ನು ಸರ್ಕಾರದವರು ಮುಚ್ಚುವುದಕ್ಕೆ ಏನಾದರೂ ಮನಸ್ಸು ಮಾಡುತ್ತೀರೋ ಹೇಗೆ ಎಂಬುದನ್ನು ತಿಳಿಸಬೇಕು.

ಶ್ರೀ ಬಿ. ಬಸವಲಿಂಗಪ್ಪ : ಸರ್ಕಾರದ ನಿಲುವು ಸ್ಪಷ್ಟ . ಕಾನೂನು ಕೂಡ ಸ್ಪಷ್ಟ, ಆದರೆ ಅದನ್ನು ನಾವು ಕಾರ್ಯಾಚರಣೆ ಮಾಡುವಾಗ ಯಾವರೀತಿಯಲ್ಲಿ ಮಾಡಬೇಕು ಎನ್ನುವುದರ ಬಗ್ಗೆ ನಾವು ಯೋಚನೆ ಮಾಡುತ್ತಿದ್ದೇವೆ. ನಾನು ಆಗಲೇ ಹೇಳಿದಹಾಗೆ, ಕರ್ನಾಟಕ ಸ್ಟೇಟ್ ಪೊಲ್ಯುಷನ್ ಕಂಟ್ರೋಲ್ ಬೋರ್ಡ್‌ನಲ್ಲಿ ವ್ಯವಸ್ಥಿತವಾಗಿಯೇ ಹಾಗೆಯೇ ಉಳಿದುಹೋಗಿದೆ. ಅವರಿಗೆ ತಿಳಿದಹಾಗೆ ಅವರು ಕೆಲಸ ಮಾಡುತ್ತಿದ್ದಾರೆ. ಮೊನ್ನೆತಾನೆ ಕಾನೂನು ತಿದ್ದುಪಡಿಯಾಗಿದೆ. ಈ ಸದನದಲ್ಲಿ ಹೋದವರ್ಷ ಸೆಪ್ಟೆಂಬರ್‌ನಲ್ಲಿ ತಿದ್ದುಪಡಿಯಾಗಿದೆ. ತಿದ್ದುಪಡಿ ಪ್ರಕಾರ ಯಾರು ಕಾರ್ಖಾನೆಗಳಲ್ಲಿ ಇಟ್ಟುಕೊಂಡು ಮಾಲಿನ್ಯ ಮಾಡುತ್ತಾರೆ. ಯಾರು ಯೋಚನೆ ಮಾಡದಹಾಗೆ ಮಾಲಿನ್ಯ ಮಾಡುವುದಕ್ಕೆ ಹೊರಟಿದ್ದಾರೆ, ಪರಿಸರ ಕೆಡಿಸುತ್ತಾರೆ, ಜೀವರಾಶಿಗಳಿಗೆಲ್ಲಾ ಅಲಂಕಾರ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ, ಹೊಳೆಗಳಿಗೆ ನೀರನ್ನು ಬಿಡುತ್ತಾರೆ, ಇಂತಹವರ ಬಗ್ಗೆ ಕೂಡ ತೀವ್ರವಾಗಿ ಕ್ರಮ ತೆಗೆದುಕೊಳ್ಳಬೇಕೆಂದು ನಾವು ಯೋಚನೆ ಮಾಡುತ್ತೇವೆ. ಅದನ್ನು ಸರ್ಕಾರ ಸ್ಪಷ್ಟವಾಗಿ ಕಾರ್ಯಾಚರಣೆ ಮಾಡುತ್ತದೆ. ಶಿಶುವ್ಯವಸ್ಥೆ ಆಗುವುದಿಲ್ಲ. ಮುಂದೆ ತೀವ್ರತೆಯಿಂದ ಅದನ್ನು ಮಾಡುವಂತೆ ನಾವು ಮಾಡುತ್ತೇವೆ.

ಅದ್ಯಕರು : ಸರ್ಕಾರಿ ಕಾರ್ಖಾನೆಗಳು ಯಾವುದೆಂದು ಅವರು ಕೇಳಿದರು.

ಶ್ರೀ ಬಿ. ಬಸವಲಿಂಗಪ್ಪ : ಸರ್ಕಾರಿ ಕಾರ್ಖಾನೆಗಳು ಯಾವುದೆಂದು ನನಗೆ ಗೊತ್ತಿಲ್ಲ. ನಮ್ಮ ರೀಜಿನಲ್ ಆಫೀಸರ್ ಬುದ್ಧಿವಂತರು ಹೆಸರನ್ನು ಕೊಡದೆ ಇರತಕ್ಕವರು ಇದ್ದಾರೆ.

ಶ್ರೀ ಆರ್.ಎನ್. ನಾಯಕ್ : ವಿವರಣೆ ಕೊಟ್ಟಿಲ್ಲ.

ಶ್ರೀ ಬಿ. ಬಸವಲಿಂಗಪ್ಪ : ವಿವರಗಳನ್ನೆ ಅವರು ನಮಗೆ ಕೊಟ್ಟಿಲ್ಲ.

ಅಧ್ಯಕ್ಷರು : ವಿವರವನ್ನು ತರಿಸಿಕೊಡಿ.

ಲಂಬಾಣಿ ತಾಂಡಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತನೆ.

353 - ಶ್ರೀ ಬಾಬುರಾವ್ ಚವಾಣ್ (ಶಹಾಬಾದ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಲಂಬಾಣಿ ತಾಂಡಗಳನ್ನು ಕಂದಾಯ ಹಳ್ಳಿಯನ್ನಾಗಿ ಪರಿವರ್ತಿಸುವ ಬಗ್ಗೆ ಸರ್ಕಾರದ ನಿಲುವೇನು?*

ಆ) *ಹಾಗಿದ್ದಲ್ಲಿ ಸಕಾರದ ಗಮನದಲ್ಲಿ ಲಂಬಾಣಿ ತಾಂಡಗಳಲ್ಲಿ ಕಂದಾಯ ಹಳ್ಳಿಯಾಗಿ ಮಾಡಲು ಹಾಕಿಕೊಂಡ ಯೋಜನೆಗಳೇನು?*

ಇ) *ಯಾವಾಗ ಕಂದಾಯ ಹಳ್ಳಿಯನ್ನಾಗಿ ಪರಿವರ್ತಿಸುವ ಬಗ್ಗೆ ಸರ್ಕಾರಿ ಆದೇಶ ಹೊರಡಿಸಲಾಗುವುದು?*

ಈ) *ಇದರ ಬಗ್ಗೆ ಸರ್ಕಾರದ ಅಭಿಪ್ರಾಯವೇನು?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ರಾಜ್ಯದಲ್ಲಿರುವ ಲಂಬಾಣಿ ತಾಂಡಗಳನ್ನು ಹ್ಯಾಮ್‌ಲೆಟ್‌ಗಳನ್ನು ಸರ್ಕಾರವು ಗುರ್ತಿಸಿ, ಎಲ್ಲೆಲ್ಲಿ ಅವಶ್ಯಕತೆ ಕಂಡುಬರುವುದೋ ಅವುಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲಾಗುವುದು.

ಆ) ಜಿಲ್ಲಾಧಿಕಾರಿಗಳೊಡನೆ ಸಮಾಲೋಚಿಸಿ ಲಂಬಾಣಿ ತಾಂಡ :ಹ್ಯಾಮ್‌ಲೆಟ್‌ಗಳನ್ನು ಹಂತ-ಹಂತವಾಗಿ ಕಂದಾಯ ಗ್ರಾಮಗಳನ್ನು ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಇ) ಆದಷ್ಟು ಶೀಘ್ರವಾಗಿ.

ಈ) (ಅ) ನಲ್ಲಿ ಉತ್ತರಿಸಿದಂತೆ.

ಶ್ರೀ ಬಾಬುರಾವ್ ಆರ್. ಚವಾಣ್ : ಸದಸ್ಯರು ಲಂಬಾಣಿ ಭಾಷೆಯಲ್ಲಿ ಪ್ರಶ್ನೆ ಕೇಳಿದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕಂದಾಯ ಮಂತ್ರಿ ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿದಂಥ ಪ್ರಶ್ನೆ ಏನೆಂದರೆ, ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಬೇಕು. ಊರಿನ ಹೊರಗಡೆ ಸಾಕಷ್ಟು ಸವಲತ್ತುಗಳಿದ್ದು, ಆ ಸವಲತ್ತುಗಳು ಲಂಬಾಣಿ ತಾಂಡಾಗಳಿಗೆ ಸಿಗುತ್ತಿಲ್ಲ. ವಿದ್ಯುಚ್ಛಕ್ತಿ, ಸ್ಕೂಲು ಮತ್ತು ಇನ್ನಿತರ ಸವಲತ್ತುಗಳಿಂದ ಲಂಬಾಣಿ ತಾಂಡಾಗಳು ವಂಚಿತವಾಗಿವೆ ಎನ್ನುವ ಮಾತನ್ನು ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ಸರ್ಕಾರ ಲಂಬಾಣಿ ತಾಂಡಾಗಳನ್ನು, ಹ್ಯಾಮ್ಲೆಟ್‌ಗಳನ್ನು ಕಂದಾಯ ಗ್ರಾಮವನ್ನಾಗಿ ಪರಿವರ್ತಿಸುವ ಬಗ್ಗೆ ನಿರ್ಧಾರ ತೆಗೆದುಕೊಂಡಿದೆ. ಅದನ್ನು ಹಂತ ಹಂತವಾಗಿ ಅನುಷ್ಠಾನಗೊಳಿಸಬೇಕಾಗುತ್ತದೆ. ಅದಕ್ಕೆ ಕೆಲವು ಕ್ರೈಟೀರಿಯಾ ಫಿಕ್ಸ್ ಮಾಡಿದ್ದೇವೆ. Population of 500 or more, 100 house-holds, 1500acres of land adjacent to the Tandas or hamlets and it should not be adjacent to the existing